ವಸತಿ ಹೀನರಿಗೆ ನಿವೇಶನ ಹಂಚಿಕೆಯ ಬಗ್ಗೆ

೧೭೩೨ ಶ್ರೀ ಜಿ.ಎಸ್. ಶಿವನಂಜಪ್ಪ.—ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ದೊಡ್ಡೇರಿ ಮಂಡಲ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಬೊರವಂತನಹಳ್ಳಿ ಗ್ರಾಮದಲ್ಲಿ ವಸತಿಹೀನರಿಗೆ ನಿವೇಶನ ಹಂಚಲಾಗಿದೆಯೇ?

ಆ) ಆ ಪೈಕಿ ಎಷ್ಟು ಜನರಿಗೆ ಹಕ್ಕುಪತ್ರ ಕೊಡಲಾಗಿದೆ ಮತ್ತು ಯಾವ ವರ್ಷದಲ್ಲಿ ಕೊಡಲಾಗಿದೆ.

ಇ) ಹಕ್ಕುಪತ್ರ ಕೊಟ್ಟವರಿಗೆ ಮನೆಕಟ್ಟಿಕೊಳ್ಳಲು ಮಂಡಲ ಪಂಚಾಯಿತಿ ಲೈಸನ್ಸ್ ಕೊಟ್ಟಿಲ್ಲ ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಷ ಮಂತ್ರಿಗಳು).—

ಅ) ಹೌದು.

ಆ) ೧೯೮೭–೮೮ರಲ್ಲಿ ಆರು ಜನರಿಗೆ ಹಕ್ಕುಪತ್ರ ಕೊಡಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ. ಆದರೆ ೧೯೮೩ರ ಜಿಲ್ಲಾಪರಿಷತ್ ಕಾಯಿದೆಯ ಕಲಂ ೬೪ ರ ಪ್ರಕಾರ ಮಂಡಲ ಪಂಚಾಯತಿಯೂ ಲೈಸನ್ಸ್‌ಗಾಗಿ ಅರ್ಜಿ ಸ್ವೀಕರಿಸಿದ ಮೂವತ್ತು ದಿನಗಳೊಳಗಾಗಿ ಅಂತಹ ಅನುಮತಿಯನ್ನು ನೀಡಬಹುದೇ ಅಥವಾ ಇಲ್ಲವೇ ಎಂದು ನಿರ್ಧರಿಸದಿದ್ದರೆ ಅಂತಹ ಅನುಮತಿಯನ್ನು ನೀಡಲಾಗಿದೆ ಎಂದು ಭಾವಿಸತಕ್ಕದೆಂದು ಇದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ಬಹುಶಃ ಮೂರನೇ ಪ್ರಶ್ನೆಗೆ ಇಲ್ಲ ಎಂದು ಉತ್ತರ ಕೊಟ್ಟಿರುವುದನ್ನು ನೋಡಿದಾಗ, ನಿಮ್ಮ ಅಧಿಕಾರಿಗಳು ಈ ಸಭೆಯನ್ನು ಎಷ್ಟು ಲಘುವಾಗಿ ತೆಗೆದು ಕೊಂಡಿದ್ದಾರೆ ಎಂದು ಅರ್ಥವಾಗುತ್ತದೆ. ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದೆ ಹೇಳಿದ್ದಾರೆ, ಆದರೆ ಸುಮಾರು ೧೦–೧೫ ಅರ್ಜಿಗಳನ್ನು ಡಿವಿಜನಲ್ ಕಮಿಷನರ್‌ರವರಿಗೆ, ಡೆಪ್ಯುಟಿ ಕಮಿಷನರ್‌ರವರಿಗೆ, ಜಾಲಪ್ಪನವರಿಗೆ ಕೊಟ್ಟಿದ್ದರೂ ಸಹ, ಅದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದರೆ ಹೇಗೆ. ಮಾನ್ಯ ಅಧ್ಯಕ್ಷರೆ ಮೂಲಕ ಈ ಪತ್ರಗಳನ್ನು ತವಗೆ ಕೊಡುತ್ತಿದ್ದೇನೆ. ಈಗ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನೀವು ಏನು ಆಕ್ಷನ್ ತೆಗೆದುಕೊಳ್ಳುತ್ತೀರಿ ಎಂಬುದನ್ನು ಮೊದಲು ನೀವು ಹೇಳಬೇಕು. ಇಲ್ಲದೇ ಹೋದರೆ ಸರಿಯಾದ ಉತ್ತರ ಕೊಡುವುದಕ್ಕೆ ಬರುವುದಿಲ್ಲ. ನಾನು ಅರ್ಜಿ ಬರೆದಿದ್ದೇನೆ. ಜಾಲಪ್ಪನವರಿಗೆ ೩–೭–೧೯೮೭ ರಲ್ಲಿ ಅರ್ಜಿ ಕೊಟ್ಟಿದ್ದೇನೆ. ೨೨–೧೦–೧೯೮೭ ರಲ್ಲಿ ಅರ್ಜಿದಾರರು ಕೊಟ್ಟಿದ್ದಾರೆ. ೨–೫–೧೯೮೭ ರಲ್ಲಿ ಅದಕ್ಕೆ ಡಿ. ಸಿ. ಯವರು ಉತ್ತರ ಕೊಟ್ಟಿದ್ದಾರೆ. ಪುನಃ ೩೦–೭–೧೯೮೭ಕ್ಕೆ ಅರ್ಜಿ ಕೊಟ್ಟಿದ್ದೇವೆ. ಇಷ್ಟಾದರೂ ಸಹ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದರೆ ನಿಮ್ಮಿಂದ ಯಾವ ರೀತಿಯ ಉತ್ತರವನ್ನು ಬಯಸಬಹುದು, ಆ ಬಡವರಿಗೆ ಏನು ಅನುಕೂಲ ಆಗುತ್ತದೆ ಎಂಬುದನ್ನು ನಾನು ಗಂಭೀರವಾಗಿ ಸಭೆಯ ಗಮನಕ್ಕೆ ಅಧ್ಯಕ್ಷರ ಮೂಲಕ ತರಬೇಕಾಗುತ್ತದೆ. ಈ ಭೂಮಿ ೧೯೭೬–೭೭ನೇ ಇಸವಿಯಲ್ಲಿ ಆಕ್ವಿಜಿಷನ್ ಆಯಿತು. ೧೯೮೭ನೇ ಇಸವಿಯಲ್ಲಿ ಹಕ್ಕುಪತ್ರ ಕೊಟ್ಟಿದ್ದಾರೆ. ಇದುವರೆಗೂ ಅಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಲೈಸೆನ್ಸ್ ಕೊಟ್ಟಿಲ್ಲ. ಅಲ್ಲಿನ ವಿಲೇಜ್ ಆಕೌಂಟೆಂಟ್‌ಗೆ ಸಸ್ಪೆಂಡ್ ಮಾಡಿದ್ದೇವೆ, ಸರ್ಚ್ ವಾರೆಂಟ್ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ವಿಲೇಜ್ ಆಕೌಂಟೆಂಟ್, ತಹಸೀಲ್ದಾರ್ ಮತ್ತು ಅಲ್ಲಿನ ರಾಜಕೀಯ ವ್ಯಕ್ತಿ ಈ ಮೂರೂ ಜನ ಸೇರಿ ಲೈಸೆನ್ಸ್ ಕೊಡುವುದಕ್ಕೆ ಅಡ್ಡಿಬರುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳಲಿಕ್ಕೆ ಅವಕಾಶಕೊಡಿ.

ಶ್ರೀ ಜಿ. ಎಸ್. ಶಿವಸಂಜಪ್ಪ.—ಅಧ್ಯಕ್ಷರೇ, ಇದಕ್ಕೆ ಉತ್ತರ ಕೊಡುವುದಕ್ಕೆ ಬರುವುದಿಲ್ಲ. ನೀವು ನಾಳೆವರೆಗೆ ಟೈಮ್ ತೆಗೆದುಕೊಳ್ಳಿ. ಇದಕ್ಕೆ ನೇರವಾಗಿ ಯಾರು ಕಾರಣರು ಎಂಬುದಕ್ಕೆ ಉತ್ತರ ಬೇಕು. ಇಲ್ಲದೇ ಹೋದರೆ ನೀವು ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ನಾನು ಪ್ರಶ್ನೆ ಕೇಳುವುದಕ್ಕೂ ಆಗುವುದಿಲ್ಲ. ಆಲ್ಲಿ ವಿಲೇಜ್ ಆಕೌಂಟೆಂಟ್ ಇಲ್ಲ ಎಂದು ಹೇಳುತ್ತಾರೆ, ಅವರಿಗೆ ಸರ್ಟಿಫಿಕೇಟ್ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಆದರೆ ಅಲ್ಲಿಯ ತಹಸೀಲ್ದಾರ್‌ರವರು ಪ್ರತಿ ತಿಂಗಳೂ ಅವರಿಗೆ ಸಂಬಳ ಕೊಡುತ್ತಿದ್ದಾರೆ. ಈ ವಿಲೇಜ್ ಆಕೌಂಟೆಂಟ್, ತಹಸೀಲ್ದಾರ್ ಮತ್ತು ಭೂಮಾಪಕ ಮೂರು ಜನರೂ ಶಾಮೀಲಾಗಿ ಲೈಸೆನ್ಸ್ ಕೊಡುವುದಕ್ಕೆ ಅಡ್ಡಿ ಬರುತ್ತಿದ್ದಾರೆ. ಮಂಡಲ್ ಪಂಚಾಯತ್‌ನಲ್ಲಿ ಕೇಳಿದರೆ ರೆಕಾರ್ಡ್ಸ್ ಇಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಭಾಷಣ ಬೇಡ, ನೇರವಾಗಿ ಕ್ಲಾರಿಫಿಕೇಷನ್ ಕೇಳಿರಿ.

ಶ್ರೀ ಜಿ. ಎಸ್. ಶಿವಸಂಜಪ್ಪ.—ನೇರವಾಗಿ ಉತ್ತರ ಕೊಟ್ಟಿದ್ದರೆ ನಾನೂ ನೇರವಾಗಿ ಪ್ರಶ್ನೆ ಕೇಳುತ್ತಿದ್ದೆ. ನಮಗೆ ಇದಂ ಗೊತ್ತೇ ಇಲ್ಲ ಎಂದು ಹೇಳುತ್ತಿದ್ದಾರೆ. ಹಕ್ಕುಪತ್ರ ಕೊಟ್ಟಿದ್ದಾರೆ. ಆದರೆ ಆಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಹೋದರೆ ಅವರ ಮೇಲೆ ಕೇಸ್ ಹಾಕಿದ್ದಾರೆ. ಕಾನೂನು ಪ್ರಕಾರ ಡೀಮ್ಡ್ ಲೈಸೆನ್ಸ್ ಕೊಟ್ಟಿದ್ದಾಗಿದೆ ಎಂದು ಮನೆ ಕಟ್ಟಿಕೊಳ್ಳುವುದಕ್ಕೆ ಹೋದರೆ, ಗುಡಿಸಲು ಕಟ್ಟಿಕೊಳ್ಳುವುದಕ್ಕೆ ಹೋದರೆ ಅವರ ಮೇಲೆ ೧೦–೧೫ ಪೋಲೀಸ್ ಕೇಸ್ ಹಾಕಿದ್ದಾರೆ. ಇದರಲ್ಲಿ ತಹಸೀಲ್ದಾರ್‌ರವರು ಶಾಮೀಲಾಗಿದ್ದಾರೆ. ಇದೆಲ್ಲಾ ಆಗಿದ್ದರೂ ಕೂಡಾ ಗೊತ್ತಿಲ್ಲ ಎಂದರೆ ಏನು ಕೇಳುವುದು. ನೀವು ಇದಕ್ಕೆ ಯಾವರೀತಿ ಲೈಸೆನ್ಸ್ ಕೊಡಿಸುತ್ತೀರಿ. ಆಲ್ಲಿನ ವಿಲೇಜ್ ಆಕೌಂಟೆಂಟ್ ಮತ್ತು ತಹಸೀಲ್ದಾರ್ ಇಬ್ಬರನ್ನೂ ನೀವು ಸಸ್ಪೆಂಡ್ ಮಾಡುತ್ತೀರಾ ? ನಾನು ನಿಮಗೆ ರೆಕಾರ್ಡ್ಸ್ ಕೊಡುತ್ತೇನೆ, ಪ್ರೈಮಾಫೇಸಿ ಇದೆ. ಸಿವಿಲ್ ಕೋರ್ಟಿನಲ್ಲಿ ತೀರ್ಮಾನವಾಗಿದೆ. ಆಲ್ಲಿನ ತಹಶೀಲ್ದಾರರು ವಿಲೇಜ್ ಆಕೌಂಟೆಂಟ್ ಮತ್ತು ರಾಜಕೀಯ ಪುಢಾರಿ ಈ ಮೂರು ಜನರು ಸೇರಿ ಕೊಂಡು ಅನ್ಯಾಯ ಮಾಡುತ್ತಿದ್ದಾರೆ. ಅವರಿಗೆ ಹಕ್ಕು ಪತ್ರ ಕೊಟ್ಟಿದ್ದಾರೆ. ಸರ್ಕಾರವೇ ಹಕ್ಕು ಪತ್ರ ಕೊಟ್ಟು ಸರ್ಕಾರವೇ ಅವರ ಮೇಲೆ ಕೇಸುಕೆಳನ್ನು ಹಾಕಿಸಿದೆ. ಸರ್ಕಾರದ ಗಮನಕ್ಕೆ ಇದು ಬಂದಿಲ್ಲವೆಂದರೆ ಹೇಗೆ ? ಅವರು ಬರವರಿದ್ದಾರೆ. ನಾನು ಈ ರೆಕಾರ್ಡ್‌ಗಳನ್ನು ಕಳುಹಿಸಿ ಕೊಡುತ್ತೇನೆ ದಯಮಾಡಿ ಸ್ವಲ ನೋಡಿ.

ಶ್ರೀ ಆರ್. ಬಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಕೇಸ್ ಹಾಕಿಸಿದ್ದಾರೆಂದು ಹೇಳುವುದನ್ನು ನಾನು ಸಂಪೂರ್ಣವಾಗಿ ನಿರಾಕರಿಸುತ್ತೇನೆ. ಪ್ರಶ್ನೆ ಏನಿದೆ ಎಂದರೆ ಸರ್ಕಾರದವರು ಹಕ್ಕ ಪತ್ರ ಕೊಟ್ಟಿದ್ದಾರೆ. ಅವರು ಆ ಜಾಗದಲ್ಲಿ ಮನೆ ಕಟ್ಟಿಕೊಳ್ಳುವ ಇಚ್ಛೆಯಿಂದ ಲೈಸೆನ್ಸ್‌ಗೆ ಅಪ್ಲೈ ಮಾಡಿದ್ದಾರೆ, ಜಿಲ್ಲಾ ಪರಿಷತ್ತು ಕಾಯ್ದೆ ಸೆಕ್ಷನ್ ೬೪ರ ಪ್ರಕಾರ ಮಂಡಲ ಪಂಚಾಯಿತಿಗೆ ಅರ್ಜಿ ಹಾಕಿಕೊಳ್ಳಬೇಕು. ಅವರು ಅರ್ಜಿ ಹಾಕಿದ ೩೦ ದಿವಸಗಳೊಳಗಾಗಿ ಮಂಡಲ ಪಂಚಾಯಿತಿಯವರು ಲೈಸೆನ್ಸ್ ಕೊಡಬೇಕು ಇಲ್ಲದಿದ್ದರೆ ಅವರ ಅರ್ಜಿಯನ್ನು ರಿಜೆಕ್ಟ್ ಮಾಡಬೇಕು ಒಂದು ವೇಳೆ ರಿಜೆಕ್ಟ್ ಮಾಡಿದ್ದಿದ್ದರೆ ನಿಮಗೆ ಲೈಸೆನ್ಸ್ ಮಂಜೂರಾದಂತೆ. ಒಂದು ವೇಳೆ ರಿಜೆಕ್ಟ್ ಮಾಡಿದರೆ ನೀವು ಜಿಲ್ಲಾ ಪರಿಷತ್ತಿನ ಪಬ್ಲಿಕ್ ವರ್ಕ್ಸ್ ಕಮಿಟಿಗೆ ಅಫೀಲು ಮಾಡಿಕೊಳ್ಳಬೇಕು. ನಾನು ತಮ್ಮಲಿ ವಿನಂತಿ ಮಾಡಿ ಕೊಳ್ಳುತ್ತೇನೆ ತಾವು ಜಿಲ್ಲಾ ಪರಿಷತ್ತಿಗೆ ಅರ್ಜಿಹಾಕಿದ್ದರೆ ತಮಗೆ ಸಹಾಯ ಮಾಡುವಂತೆ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ಹೇಳಬಹುದು.

ಶ್ರೀ ಜಿ. ಎಸ್. ಶಿವಸಂಜಪ್ಪ.—ಮಾನ್ಯ ಅಧ್ಯಕ್ಷರೇ ನಾವು ಮಂಡಲ ಪಂಚಾಯಿತಿಗೆ ಅರ್ಜಿ ಹಾಕಿದರೆ ಅಲ್ಲಿ ಯಾವ ದಾಖಲೆಗಳು ಇಲ್ಲವೆಂದು ಇಲ್ಲವೆಂದು ಹೇಳುತ್ತಾರೆ. ಮಂಡಲ್ ಪಂಚಾಯಿತಿಗೆ ಅರ್ಜಿ ಹಾಕಿದರೆ ಮಂತ್ರಿಗಳು ಲೈಸೆನ್ಸ್ ಕೊಡಿಸುತ್ತಾರೆಯೇ ? ಎರಡನೆಯದಾಗಿ ಮಂಡಲ ಪಂಚಾಯಿತಿಗೆ ಅರ್ಜಿ ಹಾಕಿದ್ದು ಅಲ್ಲಿ ದಾಖಲೆಗಳು ಇಲ್ಲದಿರುವುದರಿಂದ ನಮ್ಮಲ್ಲಿರತಕ್ಕಂಥ ದಾಖಲೆಗಳನ್ನು ಅವರು ನಂಬುತ್ತಿಲ್ಲ. ಆಲ್ಲಿನ ವಿಲೇಜ್ ಆಕೌಂಟೆಂಟ್ ಅಬ್‌ಸ್ಕಾಂಡ್ ಆಗಿದ್ದಾನೆಂದು ತಹಸೀಲ್ದಾರರು ಹೇಳುತ್ತಿದ್ದಾರೆ. ಆದರೂ ಪ್ರತಿ ತಿಂಗಳು ಆ ವಿಲೇಜ್ ಆಕೌಂಟೆಂಟ್‌ಗೆ ಸಂಬಳ ಕೊಡುತ್ತಿದ್ದಾರೆ. ಈ ಇಬ್ಬರು ಸೇರಿಕೊಂಡು ಆ ಬಡವರಿಗೆ ಮೋಸ ಮಾಡುತ್ತಿದ್ದಾರೆ. ನಾನು ನೇರವಾಗಿ ಅಪಾದನೆ ಮಾಡುತ್ತಿದ್ದೇನೆ. ಸಂಬಂಧಪಟ್ಟ ದಾಖಲೆಗಳನ್ನು ಸಹ ಕೊಡುತ್ತೇನೆ. ನಾವು ಜಿಲ್ಲಾ ಪರಿಷತ್ತಿಗೆ ಅಫೀಲು ಮಾಡಿದರೆ ಅಲ್ಲಿನ ಮುಖ್ಯ ಕಾರ್ಯದರ್ಶಿಯವರಿಗೆ ಹೇಳಿ ಲೈಸೆನ್ಸ್ ಕೊಡಿಸು

ವುದಕ್ಕೆ ಡೈರೆಕ್ಷನ್ಸ್ ಕೊಡುತ್ತೀರಾ ? ಮತ್ತು ಅನ್ಯಾಯವಾಗಿ ಬಡವರಮೇಲೆ ಹಾಕಿರತಕ್ಕಂಥ ೧೦–೧೫ ಪೋಲೀಸ್ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ ಇದು ತಹಸೀಲ್ದಾರರಿಗೂ ಮತ್ತು ವಿಲೇಜ್ ಅಕೌಂಟೆಂಟ್‌ಗೆ ಸಂಬಂಧ ಹೇಗೆ ಬರುತ್ತದೆ ? ಲೈಸೆನ್ ಕೊಡುವವರು ಮಂಡಲ ಪಂಚಾಯಿತಿಯವರು ಈ ಕಾಯ್ದೆಯನ್ನು ನಾವೆಲ್ಲ ಒಪ್ಪಿಕೊಂಡಿದ್ದೇವೆ. ಕಾಯ್ದೆ ಪ್ರಕಾರ ಲೈಸೆನ್ಸ್ ಕೊಡುವವರು ಮಂಡಲ ಪಂಚಾಯಿತಿಯವರು. ಸರ್ಕಾರ ಲೈಸೆನ್ಸ್ ಕೊಡುವುದಕ್ಕೆ ಆಗುತ್ತದೆಯೇ ? ಮಂಡಲ ಪಂಚಾಯಿತಿಗೆ ಅರ್ಜಿ ಹಾಕಿದ್ದು ಆವರು ಆ ಅರ್ಜಿಯನ್ನು ರಿಜೆಕ್ಟ್ ಮಾಡಿದ್ದರೆ ತಾವು ಜಿಲ್ಲಾ ಪರಿಷತ್ತಿನ ಪಬ್ಲಿಕ್ ವರ್ಕ್ಸ್ ಕಮಿಟಿಗೆ ಅಪೀಲು ಸಲ್ಲಿಸಿದರೆ ಆಗ ನಾವು ಅಲ್ಲಿನ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಸಾಧ್ಯವಾದರೆ ಇವರಿಗೆ ಸಹಾಯಮಾಡಿ ಎಂದು ತಿಳಿಸಬಹುದು.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಂಡಿಲ್ಲ. ರೆಕಾರ್ಡ್‌ಗಳು ವಿಲೇಜ್ ಅಕೌಂಟೆಂಟ್ ಮತ್ತು ತಹಸೀಲ್ದಾರರ್ ಹತ್ತಿರ ಇವೆ. ಆ ರೆಕಾರ್ಡ್‌ಗಳನ್ನು ಆವರು ಮಂಡಲ ಪಂಚಾಯಿತಿಗೆ ಕೊಡಬೇಕು. ಅದು ಮಾಡಿಲ್ಲ. ನಾನು ಸಹ ಲಾಯರ್ ಆಗಿರುವವನು. ನನಗೂ ಗೊತ್ತಿದೆ ಪ್ರಾವಿಜನ್ ಆಫ್ ಲಾ. ಆ ಬಡವರ ಮೇಲೆ ೧೫ ಕೇಸುಗಳನ್ನು ಹಾಕಿದ್ದೀರಲ್ಲ ಇದು ಸರಿಯೇ...

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ತಾವು ಕಂದಾಯ ಸಚಿವರಿಗೆ ಪ್ರಶ್ನೆ ಹಾಕಬೇಕಾಗಿತ್ತು.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ ನನ್ನ ಪ್ರಶ್ನೆಯನ್ನು ಮಾನ್ಯ ಮಂತ್ರಿಗಳು ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು.—ಇಲ್ಲಿ ಆರ್‌ಗ್ಯುಮೆಂಟ್ಸ್ ಬೇಡ. ಇಲ್ಲಿ ಬಂದಿರುವವರೆಲ್ಲರೂ ತಿಳುವಳಿಕೆ ಇರುವವರೇ.

(ಗೊಂದಲ)

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ ವಿಲೇಜ್ ಅಕೌಂಟೆಂಟ್ ಅಬ್ಸ್‌ಕಾಂಡೆಂಟ್ ಆಗಿದ್ದಾನೆಂದು ತಹಶೀಲ್ದಾರರು ಹೇಳುತ್ತಿದ್ದಾರೆ. ಡಾಕ್ಯುಮೆಂಟ್ಸ್ ಅವರ ಹತ್ತಿರ ಇವೆ. ಮಂಡಲ ಪಂಚಾಯಿತಿಗೆ ಸಬ್‌ಮಿಟ್ ಮಾಡಿಲ್ಲ. ವಿಲೇಜ್ ಅಕೌಂಟೆಂಟ್‌ಗೆ ಸರ್ಚ್ ವಾರೆಂಟ್ ಇಷ್ಯೂ ಮಾಡಿದ್ದಾರೆ. ಆದರೂ ಪ್ರತಿ ತಿಂಗಳು ಸಂಬಳ ಕೊಡುತ್ತಿದ್ದಾರೆ. ಅದ್ದರಿಂದ ನೀವು ಒಂದು ಡೈರೆಕ್ಷನ್ ಕೊಡಿ.

ಶ್ರೀ ಆರ್. ವಿ. ದೇಶಪಾಂಡೆ.—ಕಾನೂನು ಪ್ರಕಾರ ಲೈಸೆನ್ಸ್ ಸಿಗುತ್ತದೆ. ಒಂದು ವೇಳೆ ತಹಸೀಲ್ದಾರರು ವಿಲೇಜ್ ಅಕೌಂಟೆಂಟ್ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದರೆ ಕಂದಾಯ ಸಚಿವರಿಗೆ ನೇರವಾಗಿ ಪ್ರಶ್ನೆ ಹಾಕಬೇಕಾಗಿತ್ತು.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ಲ್ಯಾಂಡ್ ಅಕ್ವಿಸಿಷನ್ನನ್ನು ಯಾರೇ ಮಾಡಲಿ, ಹೌಸ್ ಸೈಟ್‌ಗಳಿಗೆ ಲೈಸನ್ಸ್ ಕೊಡತಕ್ಕವರು ಪಂಚಾಯಿತಿಯವರು. ಅವರು ಹೇಳ ತಕ್ಕಂತದ್ದು ಏನೆಂದರೆ, ವಿಲೇಜ್ ಅಕೌಂಟೆಂಟ್ ಹತ್ತಿರ ಎಲ್ಲಾ ಡಾಕ್ಯುಮೆಂಟ್ಸ್‌ಗಳು ಇವೆ. ಈ ವಿಲೇಜ್ ಅಕೌಂಟೆಂಟ್ ಅಬ್ಸ್‌ಕಾಂಡ್ ಆಗಿದ್ದಾನೆ. ಆದರೆ ಪಗಾರ ಮಾತ್ರ ರೆಗ್ಯುಲರ್ ಆಗಿ ಅವನು ತೆಗೆದುಕೊಳ್ಳುತ್ತಿದ್ದಾನೆ. ಮಂಡಲ ಪಂಚಾಯಿತಿಯವರು ಡಾಕ್ಯುಮೆಂಟ್ಸ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದಾರೆ. ಡಾಕ್ಯುಮೆಂಟ್ಸ್ ವಿಲೇಜ್ ಅಕೌಂಟೆಂಟ್ ಹತ್ತಿರ ಇದೆ. ಇದರಿಂದ ಬಡವರು ಸಫರ್‌ಪಡುತ್ತಿದ್ದಾರೆ. ನೀವು ತಹಶೀಲ್ದಾರ್‌ಗೆ ಡೈರಕ್ಷನ್ ಕೊಟ್ಟು ವಿಲೇಜ್ ಅಕೌಂಟೆಂಟ್ ಹತ್ತಿರ ಇರುವ ಡಾಕ್ಯುಮೆಂಟ್ಸ್‌ನ್ನು ಮಂಡಲ ಪಂಚಾಯಿತಿಯವರಿಗೆ ಸಬ್‌ಮಿಟ್ ಮಾಡಬೇಕೆಂದು ಹೇಳಿ. ಸಬ್‌ಮಿಟ್ ಮಾಡಿದಮೇಲೆ ಆವರು ಕಾನೂನು ಪ್ರಕಾರ ಅವರು ಲೈಸನ್ಸ್‌ನ್ನು ಕೊಡುತ್ತಾರೆ, ಇದು ಹೌಸ್ ಸಬ್ಜಕ್ಟ್ ಆಗಿರುವುದರಿಂದ ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರುತ್ತದೆ. ದಯವಿಟ್ಟು ನೀವು ಡೈರೆಕ್ಷನ್‌ನ್ನು ತಹಸೀಲ್ದಾರ್‌ರವರಿಗೆ ಕೊಡಿ. ಡಾಕ್ಯುಮೆಂಟ್ ಕೊಟ್ಟಾದ ಮೇಲೂ ಮಂಡಲ ಪಂಚಾಯಿತಿಯವರು ಲೈಸನ್ಸ್ ಕೊಡದೇ ಇದ್ದರೆ ಆಮೇಲೆ ಜಿಲ್ಲಾಪರಿಷತ್ತಿಗೆ ಅಪೀಲ್ ಮಾಡಿಕೊಳ್ಳುತ್ತಾರೆ. ಡಾಕ್ಯುಮೆಂಟೇ ಇಲ್ಲದೇ ಅವರು ಅಪೀಲ್ ಹೇಗೆ ಹಾಕುತ್ತಾರೆ ?

ಶ್ರೀ ಆರ್. ವಿ. ದೇಶಪಾಂಡೆ.— ೧೯೮೭-೮೮ರಲ್ಲಿ ಎಲ್ಲರಿಗೂ ಹಕ್ಕು ಪತ್ರವನ್ನು ಕೊಟ್ಟಿದ್ದೇವೆ. ಅವರುಗಳ ಕೈಯಲ್ಲಿ ಹಕ್ಕು ಪತ್ರಗಳು ಇವೆ. ಹಕ್ಕು ಪತ್ರ ಇದೆ ಎಂದೆ ಮೇಲೆ ಅದು ಒನರ್ ಶಿಪ್ ರೈಟ್ಸ್ ಇದ್ದ ಹಾಗೆ. ಒಂದು ವೇಳೆ ಈ ಹಕ್ಕುಪತ್ರ ಕಳೆದು ಹೋಗಿದ್ದರೆ ಪುನಃ ಅದನ್ನು ನಾವು ಕೊಡಬೇಕಾಗುತ್ತದೆ. ತಹಶೀಲ್ದಾರ್‌ರವರಿಗೆ ಹೇಳಿ ಬಡವರಿಗೆ ತೊಂದರೆಯಾಗದಂತೆ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಪ್ರಶ್ನೆಯನ್ನು ತಾವು ಸ್ವಲ್ಪ ಸಾವಧಾನವಾಗಿ ಕೇಳಬೇಕು.

ಅಧ್ಯಕ್ಷರು.— ಸಾವಧಾನವಾಗಿ ಕೇಳಬೇಕೆಂದರೆ. ತಮಗೆ ಇನ್ನೆಷ್ಟು ಟೈಮ್ ಕೊಡಬೇಕು ?

ಶ್ರೀ ಎಂ. ವೀರಪ್ಪ ಮೊಯಿಲಿ.— ಸಮಯ ಮುಖ್ಯ ಅಲ್ಲ. ಇದರಲ್ಲಿ ಏನಾಗಿದೆ ಎಂದರೆ, ಮಾನ್ಯ ಸದಸ್ಯರು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಆದರೆ ಮಾನ್ಯ ಸಚಿವರು ಬಹಳ ಅಕಾಡೆಮಿಕ್ ಆಗಿ ಉತ್ತರ ಕೊಡುತ್ತಿದ್ದಾರೆ. ರೆವಿನ್ಯೂ ಇಲಾಖೆ ಮತ್ತು ಮಂಡಲ ಪಂಚಾಯಿತಿಗಳ ಮೇಲೆ ಹತೋಟಿ ಇಟ್ಟುಕೊಳ್ಳುವುದಕ್ಕೆ ಸರ್ಕಾರಕ್ಕೆ ಆಗದುವುದಿಲ್ಲ ಎಂದರೆ ಹೇಗೆ ? ರೆವಿನ್ಯೂ ಇಲಾಖೆ ಮೇಲೆ ನಿಮಗೆ ಹತೋಟಿ ಇಲ್ಲವೆ ? ಪಂಚಾಯತ್ ಇಲಾಖೆ ಮೇಲೆ ನಿಮಗೆ ಹತೋಟಿ ಇಲ್ಲವೆ? ಇಲ್ಲಿ ಪ್ರಶ್ನೆ ಏನು ಎಂದರೆ, ಮಾನ್ಯ ಅಧ್ಯಕ್ಷರೆ ತಮಗೂ ಹಳ್ಳಿಗಳ ಬಗ್ಗೆ ಅನುಭವ ಇದೆ. ಕೆಲವು ತಹಶೀಲ್ದಾರುಗಳು ಟ್ರಾನ್ಸ್‌ಫರ್ ಆದ ಮೇಲೂ ಅವರು ಬ್ಲ್ಯಾಂಕ್ ಹಕ್ಕುಪತ್ರಗಳಿಗೆ ಸಹಿ ಹಾಕಿದ ಹಕ್ಕು ಪತ್ರಗಳನ್ನು ಇಷ್ಯೂ ಮಾಡಿರುವುದನ್ನು ನಾವು ಅನೇಕ ಕಡೆ ನೋಡಿದ್ದೇವೆ. ನಮ್ಮ ತಾಲ್ಲೂಕಿನಲ್ಲೂ ಈ ತರಹ ಆಗಿದೆ. ಈಗ ಇಲ್ಲಿ ಏನಾಗಿದೆ ಎಂದರೆ, ಹೌಸ್ ಲೈಸನ್ಸ್ ಕೊಡುವುದಕ್ಕೆ ಮಂಡಲ ಪಂಚಾಯಿತಿಯವರು ಡಾಕ್ಯುಮೆಂಟ್‌ನ್ನು ಕೇಳಿದ್ದಾರೆ. ಡಾಕ್ಯುಮೆಂಟ್‌ಗಳನ್ನು ವಿಲೇಜ್ ಅಕೌಂಟೆಂಟ್ ಇಟ್ಟುಕೊಂಡು ತಲೆಮರೆಸಿಕೊಂಡಿದ್ದಾನೆ. ಆದರೆ, ಈ ವಿಲೇಜ್ ಅಕೌಂಟೆಂಟ್‌ಗೆ ತಹಶೀಲ್ದಾರ್‌ರವರು ಸಂಬಳ ಕೊಡುತ್ತಿದ್ದಾರೆ. ತಹಶೀಲ್ದಾರ್ ಈ ವಿಲೇಜ್ ಅಕೌಂಟೆಂಟ್‌ಗೆ ಸಂಬಳ ಏಕೆ ಕೊಡುತ್ತಾನೆ ? You must keep that Tahasildar under suspension immediately for committing irregularity. How can he give contradictory report ? You wind up your Rural Development department secretariat. Why you should have that secretariat ? It is a question of housing and house sites where both the departments are involved. ಆದ್ದರಿಂದ ಇದರ ಬಗ್ಗೆ ತಾವು ಅಕಾಡೆಮಿಕ್ ಆಗಿ ಉತ್ತರ ಕೊಡಬಾರದು.

ಶ್ರೀ ಆರ್. ವಿ. ದೇಶಪಾಂಡೆ.— ಜಿಲ್ಲಾಪರಿಷತ್ ಕಾಯಿದೆ ಮತ್ತು ಕಾನೂನು ಪ್ರಕಾರವಾಗಿ ಹೌಸ್ ಸೈಟ್ ಅಲಾಟ್ ಮಾಡುವ ಕೆಲಸ ಮಂಡಲ ಪಂಚಾಯತ್‌ನವರದ್ದು. ಈಗ ಮಾನ್ಯ ವೀರಪ್ಪ ಮೊಯಿಲಿಯವರು ಅಲ್ಲಿಯ ತಹಶೀಲ್ದಾರರಿಂದ ಮತ್ತು ವಿಲೇಜ್ ಅಕೌಂಟೆಂಟ್‌ರವರಿಂದ ಹೀಗೆ ಸಮಸ್ಯೆಯಾಗಿದೆ ಎಂದು ಹೇಳುತ್ತಿದ್ದಾರೆ. ಆದುದರಿಂದ ನಾನು ಆ ಬಗ್ಗೆ ನೇರವಾಗಿ ಚೌಕಸಿ ಮಾಡಿಸಿ, ಅಲ್ಲಿಯ ಸಾರ್ವಜನಿಕರಿಗೆ ಏನಾದರೂ ಅಧಿಕಾರಿಗಳಿಂದ ತೊಂದರೆಯಾಗಿದ್ದಲ್ಲಿ ಆ ಬಗ್ಗೆ ವಿಚಾರ ಮಾಡಿ, ತಪ್ಪಿತಸ್ಥರು ಎಂದು ಕಂಡು ಬಂದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೊರೆದಿರುವ ಕೊಳವೆ ಬಾವಿಗಳು

೨೨೫೫. ಶ್ರೀಮತಿ ವಂಸೋರಮಾ ವಂಧ್ವರಾಜ್ (ವಿಧಾನ ಸಭಾ ಸದಸ್ಯರು).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೊರೆದಿರುವ ಕೊಳವೆ ಬಾವಿಗಳಲ್ಲಿ (ತೋಡಿರುವ ಕೊಳವೆ ಬಾವಿಗಳಲ್ಲಿ) ಹೆಚ್ಚು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಆ ಕ್ಷೇತ್ರದ ಜನರು ಕುಡಿಯುವ ನೀರಿನ ಕೊರತೆಯಿಂದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?